ಮೇರೆಗೆ ಹಂಚಬೇಕಿತ್ತು. ಬದುಕುಳಿಯುವ ಸಾಧ್ಯತೆ ಕಡಿಮೆಯಿರುವ ರೋಗಿಗಳನ್ನು ಪಟ್ಟಿಯಲ್ಲಿ ಗುರುತಿಸಬೇಕಿತ್ತು. ಪಟ್ಟಿಯನ್ನು ನೋಡಿದ ಕೂಡಲೆ ಐದು ಜನರನ್ನು ಗುರುತಿಸುವುದು ಕಷ್ಟವೆನಿಸಲಿಲ್ಲ. ಇವರು 70 ವರ್ಷ ದಾಟಿದ ಬಹು ಅಂಗಾಂಗ ವೈಫಲ್ಯವಿರುವ ಮಂದಿ. ಬದುಕುಳಿಯುವ ಸಾಧ್ಯತೆ ಕಡಿಮೆ. ಕೈಬಿಡಬೇಕಾದ ಇನ್ನೆರಡು ಹೆಸರು ಹುಡುಕಲು ಸ್ವಲ್ಪ ಸಮಯ ಹಿಡಿಯಿತು. ಆರಂಭದಲ್ಲಿ ಕಷ್ಟವಾದರೂ, ಸ್ವಲ್ಪ ಹೊತ್ತು ಕಳೆದು ಐಸಿಯುನಲ್ಲಿರುವ ಇಬ್ಬರ ಶ್ವಾಸಕೋಶಗಳೂ ಪೂರ್ಣವಾಗಿ ಹಾಳಾಗಿವೆ ಎನ್ನುವುದು ಖಚಿತವಾದ ಮೇಲೆ ಕೆಲಸ ಸುಲಭವಾಯಿತು. ಕೊನೆಗೆ ಉಳಿದವರು ಐದು ಮಂದಿ. ಅವರಲ್ಲಿ ಇಬ್ಬರಿಗೆ ಡಯಾಬಿಟೀಸ್, ಬಿಪಿ ಇತ್ತು. ರಿಸ್ಕ್ ಹೆಚ್ಚು ಇರುವವರು. ಉಳಿದ ಮೂವರಿಗೆ ಇಂತಹ ಕಾಂಪ್ಲಿಕೇಶನ್ಸ್ ಇರಲಿಲ್ಲ. ಮತ್ತು ಆ ಮೂವರ ಕೇಸ್ ಹಿಸ್ಟರಿ ನೋಡಿ, ಒಂದು ಎರಡು ಮೂರು ಅಂತ ನಂಬರ್ ನೀಡಿದ್ದರು.

ಷರೀಫ್ ಮೇಷ್ಟ್ರು, "ಡೂ ಯುವರ್ ಬೆಸ್ಟ್" ಸೂತ್ರ ಅನುಸರಿಸಿಯೇ ರಾಘವನ್ ಆಕ್ಸಿಜನ್ ಹಂಚಿಕೆ ನಿಗದಿ ಮಾಡಿದ್ದರು. 70% ಆಕ್ಸಿಜನ್ ಪಡೆಯೋರು ನಿಧಾನವಾಗಿ ಚೇತರಿಸಿಕೊಳ್ಳುವ ಸಾಧ್ಯತೆ ಇದ್ದರೆ, 5% ಆಕ್ಸಿಜನ್ ಪಡೆಯುವವರು ನಿಧಾನವಾಗಿ ಸಾವಿಗೆ ಶರಣಾಗುತ್ತಾರೆ. ನಿಧನರಾದವರ ಪಾಲಿನ ಆಕ್ಸಿಜನ್ 25% ಪ್ರಮಾಣ ಪಡೆಯುತ್ತಿರುವವರಿಗೆ ಹಂಚಬಹುದು. ಹೀಗೆ ಇರುವುದರಲ್ಲಿ ಎಷ್ಟು ಒಳಿತನ್ನು ಮಾಡಲು ಸಾಧ್ಯವೋ ಅಷ್ಟನ್ನು ಅವರು ಮಾಡಿದ್ದರು. "ಇನ್ನು ಅರ್ಧ ಗಂಟೆಯಲ್ಲಿ ಏಳು ಡೆತ್‌ಗಳು! ತಪ್ಪಿಸಬಹುದಾದ ಸಾವುಗಳಿವು" ರಾಘವನ್ ಜೋರಾಗಿಯೇ ಹೇಳಿಕೊಂಡರು.

ಐದಾರು ನಿಮಿಷ ಕಳೆಯಿತು. ರಾಘವನ್ ಹಾಗೆ ಕುರ್ಚಿಗೆ ಅಂಟಿಕೊಂಡೇ ಇದ್ದರು. ಏಳು ಡೆಡ್ ಬಾಡಿ ಡೆಲಿವರಿ! ಅದೂ ಅರ್ಧ ಗಂಟೆ ಒಳಗೆ! ತಕ್ಷಣವೇ ಇಂಟರ್‌ಕಾಂ ಫೋನಿನ ಬಟನ್ ಒತ್ತಿದರು. ಆ ಕಡೆಯಿಂದ ಝಾನ್ಸಿ, "ಸರ್" ಎಂದಳು. ಝಾನ್ಸಿ ಸೋಶಿಯಲ್ ವರ್ಕ್ ಡಿವಿಷನ್ನಿನ ಹೆಡ್. ಅವಳ ಮಾತಿನಲ್ಲಿರುವ ಭಾರ ಗುರುತಿಸಿದ ಅವರು, ಈ ಬಾರಿ ಸೂಕ್ಷ್ಮವಾಗಿರಬೇಕು ಎಂದುಕೊಂಡರು. ನಿನ್ನೆಯ ವರೆಗೂ ದಿನಕ್ಕೆ ಐದು ಸಾವುಗಳನ್ನು ನಿಭಾಯಿಸಿರುವ ಝಾನ್ಸಿಗೆ ಎರಡು ತಿಂಗಳಿಂದ ರಜೆ ಪಡೆಯಲಾಗಿಲ್ಲ. "ಝಾನ್ಸಿ, ಐಸಿಯುನ ಉಷಾನ ಭೇಟಿಯಾಗ್ತಿಯಮ್ಮ, ಈಗಲೇ?" ಎಂದರು. ಝಾನ್ಸಿ ಒಪ್ಪಿಗೆ ಸೂಚಿಸಿದ ಕೂಡಲೇ, "ದಟ್ಸ್ ಮೈ ಝಾನ್ಸಿ ಕ್ವೀನ್" ಎನ್ನುತ್ತಾ ಫೋನ್ ಕೆಳಗಿಟ್ಟರು.

ಇವತ್ತು ಝಾನ್ಸಿಗೂ ಕಷ್ಟವಿದೆ. ನನಗೂ ಕಷ್ಟವಿದೆ. ಸ್ವಲ್ಪ ಹೊತ್ತು ಯೋಚಿಸಿದರು. ಸೆಕ್ಯುರಿಟಿ ಚೀಫ್ ಪೊನ್ನಪ್ಪರಿಗೆ ಫೋನ್ ಹಚ್ಚಿದರು. ಆ ಕಡೆಯಿಂದ, "ಯೆಸ್ ಬಾಸ್" ಅನ್ನೋ ಧ್ವನಿ ಕೇಳಿದ ಕೂಡಲೇ, "ಪಂದಿ ಕರಿ ಬರಲೇ ಇಲ್ಲಾ" ಎಂದರು ರಾಘವನ್ ರಾಗವಾಗಿ. "ನೀವು ಯೆಸ್ ಅಂದ್ರೆ, ಪಂದಿ ಕರಿ ಅಕ್ಕಿ ರೊಟ್ಟಿ ಈಗಲೇ ಹಾಜರ್ ಹುಜೂರ್" ಅಂದರು ಪೊನ್ನಪ್ಪ ಪ್ರತಿಯಾಗಿ. ಇದಕ್ಕೆ ಪ್ರತಿಯಾಗಿ ರಾಘವನ್‌ರಿಂದ ಬರುತ್ತಿದ್ದ ನಗು ಬರದ ಕಾರಣ, ಪೊನ್ನಪ್ಪರೇ, "ಸರ್, ಝಾನ್ಸಿ ಫೋನ್ ಮಾಡಿದ್ರು. ಐದು ಗಾರ್ಡ್‌ಗಳು ಈಗ ಐಸಿಯು ಮುಂದೆ ಹೆಚ್ಚುವರಿಯಾಗಿ ಇದ್ದಾರೆ. ಹಾಗೇ ಸಿಟಿ ಸ್ಟೇಷನ್‌ಗೆ ವಿಷಯ ತಿಳಿಸಿದ್ದೇನೆ. ಎರಡು ಗರುಡ ಜೀಪ್ ಆಸ್ಪತ್ರೆ ಹೊರಗೆ ಇದ್ದಾವೆ. ಅರ್ಧ ಗಂಟೇಲಿ ರಿಸರ್ವ್ ವ್ಯಾನ್ ಬರುತ್ತೆ ಅಂದಿದ್ದಾರೆ" ಎಂದರು. ಸರಿ ಎಂದು ಫೋನ್ ಇಟ್ಟು ತಲೆ ಎತ್ತಿದರೆ ಎದುರಿಗೆ ರಾಮಸ್ವಾಮಿ! ಇದ್ಯಾವ ಮಾಯದಲ್ಲಿ ಬಂದ ಇವ? ಗಲಿಬಿಲಿಯಾದ ರಾಘವನ್ ಬಾಯಿ ತೆಗೆಯೋ ಮುನ್ನವೇ, "ಸರ್, ನಾನು ರಾಮಸ್ವಾಮಿ, ದ ಸಪ್ಲಯರ್ ಸರ್" ಅಂದ.

"ಓ... ಸಪ್ಲಯರ್ ರಾಮಸ್ವಾಮಿ! ಎಷ್ಟು ಸಾರಿ ಫೋನ್ ಮಾಡೋದ್ ನಿಮ್ಗೆ? ಆಕ್ಸಿಜನ್ ಡೆಲಿವರಿ ಯಾವಾಗ?"

"ಡೆಲಿವರಿ ನಾಳೆ ಸಾರ್. ಫ್ಯಾಕ್ಟರಿಯಿಂದ ಹೊರಡಬೇಕಿದ್ದ ಮೂರು ಟ್ಯಾಂಕರ್‌ಗಳಲ್ಲಿ ಒಂದೇ ಹೊರಟಿರೋದು. ಅಲ್ಲಿಂದ ಅದು ಸೇಫಾಗಿ ನಮ್ಮ ರಾಜ್ಯದ ಗಡಿಯೊಳಗೆ ಬಂದರೆ, ನಾಳೆ ಬೆಳಗ್ಗೆ